ಹೇಳಿದಳು: "ನಾ ಅಂವನ್ನ ಮದುವೆಯಾಗಿದ್ರ ಚಲೋ ಇತ್ತು. ಯಾಕಂದ್ರ ಮುಂದ ಆಂವ ಕೋಕಾಕೋಲಾ ಕಂಪನಿಯ ಶೇರು ಖರೀದಿ ಮಾಡಿ ದೊಡ್ಡ ಶ್ರೀಮಂತನಾದ. ಪಾಪ, ಮೊನ್ನಿಮೊನ್ನಿ ಸತ್ತುಹೋದ."

ನಿರ್ಜನವಾಗಿದ್ದ ಹೆದ್ದಾರಿಯಲ್ಲಿ ಒಂದಷ್ಟು ಕಟ್ಟಡ, ಮನೆ, ಹೋಟೆಲು ಕಾಣಿಸತೊಡಗಿದವು. ಹೋಟೆಲಿನಂತೆ ಕಾಣಿಸುತ್ತಿದ್ದ ಕಟ್ಟಡದ ಪಕ್ಕ ಕಾರು ನಿಂತಿತು. ಒಂದು ಪಕ್ಕ ಹೋಟೆಲು, ಮತ್ತೊಂದು ಪಕ್ಕ ಸಿಮೆಂಟು, ಕಬ್ಬಿಣಕಟ್ಟಿಗೆ ಮಾರಾಟ, ಇನ್ನೊಂದೆಡೆ ಗಾಡಿಗೆ ಗ್ಯಾಸ್ ತುಂಬುವ ಸೌಕರ್ಯ ಹೀಗೆ ವ್ಯವಹಾರ ವೃದ್ಧಿಸಿಕೊಳ್ಳುವುದಕ್ಕೆ ಅನೇಕ ಕಸರತ್ತುಗಳನ್ನು ಮಾಡಿದ್ದರು. ಅಜ್ಜಿ, ಮಗ ಬೇಲಿ, ಅವನ ಹೆಂಡತಿ, ಮಕ್ಕಳು ಕತ್ತಲು ತುಂಬಿದ ರೆಸ್ಟೋರೆಂಟ್‌ನ ಒಳಗೆ ಹೋಗಿ ಕುಳಿತರು. ಮಾಲೀಕನ ಹೆಂಡತಿ ಬಂದು ಅವರ ಆರ್ಡರ್ ತೆಗೆದುಕೊಂಡಳು. 'ಏಯ್ ಹುಡುಗಿ, ಎಷ್ಟು ಚೆಂದ ಇದ್ದೀಯ. ಇಲ್ಲೆ ಇರ್ತೀಯ ನೀನು?' ಎಂದಳು. ಜೂನ್ ಸ್ಟಾರ್ 'ಇಂತಹ ಹಾಳು ಕೊಂಪೆಯಲ್ಲಿ ಇರಲಿಕ್ಕೆ ನನಗೇನು ತಲೆ ಕೆಟ್ಟಿದೆಯೇ?' ಎಂದು ಹೇಳಿಬಿಟ್ಟಳು. 'ಆ ತರಹ ಮಾತಾಡಬಾರದು. ಒಂದೆರಡು ಕೊಡ್ಲೇನು ಕೆನ್ನಿಗೆ?' ಅಜ್ಜಿ ಗದರಿದಳು. ಅಷ್ಟೊತ್ತಿಗೆ ಮಾಲೀಕ ರೆಡ್ ಸ್ಯಾಮಿ ಬಂದು ಅವರು ಆರ್ಡರ್ ಮಾಡಿದ ತಿಂಡಿಗಳನ್ನು ತಯಾರು ಮಾಡಲು ಹೆಂಡತಿಗೆ ಆರ್ಡರ್ ಮಾಡಿ ಅಲ್ಲಿಯೇ ಒಂದು ಕುರ್ಚಿಯಲ್ಲಿ ಕುಕ್ಕರಿಸಿದ. ತುಂಬ ಕೆಲಸ ಮಾಡಿದ್ದಕ್ಕೋ ಏನೋ ಅವನ ಮುಖದಲ್ಲಿ ಬೆವರು ಹರಿಯುತ್ತಿತ್ತು. ಆತ ದೀರ್ಘ ನಿಟ್ಟುಸಿರು ಬಿಡುತ್ತ ಹೇಳಿದ: "ಈ ಜೀವನ ಸಾಕಾಗೇತಿ. ಏನೂ ಆದಾಯ ಬರವಲ್ದು. ಎಷ್ಟು ದುಡಿದರೂ ಸಮಾಧಾನ ಇಲ್ಲ. ಮತ್ತ ಈ ಕಾಲದಾಗ ಯಾರನ್ನ ನಂಬಬೇಕೋ, ಯಾರನ್ನ ನಂಬಬಾರದೋ ತಿಳಿವಲ್ದು."

ಅಜ್ಜಿಗೂ ಮಾತನಾಡುವವರು ಬೇಕಾಗಿದ್ದರು. ಅವಳಿಗೆ ಅವನ ಮಾತು ಬಂಗಾರ ಸಿಕ್ಕಂತಾಯಿತು. 'ಹೌದೋ ಮಗನss, ಜನ ಮೊದಲಿನಂಗ ಇಲ್ಲ. ಎಲ್ಲ ಬದಲಿಯಾಗ್ಯಾರ.'

ರೆಡ್ ಸ್ಯಾಮ್ ಹೇಳಿದ: "ಹೋದ ವಾರ ಏನಾತು ಗೊತ್ತೇನು ಅಜ್ಜಿ, ಇಬ್ಬರು ಮರ ಕಡಿಯೋರು ತಮ್ಮ ಹಳೇ ಕಾರಿನೊಳಗ ಬಂದಿದ್ದರು. ಇಲ್ಲೆ ಬಾಜೂಕಿನ ಮಿಲ್‌ನ್ಯಾಗ ಕೆಲಸ ಮಾಡ್ತೇವಿ ಅಂತ ಹೇಳಿದರು. ಅವರು ಗ್ಯಾಸ್ ತುಂಬಿಸಿಕೊಂಡು ಹೋದರು. ಬರ್ತೇವಿ ಅಂತ ಹೇಳಿದಾರ. ಯಾವಾಗ ಬರ್ತಾರೋ ಯಾರಿಗ್ಗೊತ್ತು?"

ಮುದುಕಿ ಅಂದಿತು: 'ಅಲ್ಲಪಾ, ನೀನೊಬ್ಬ ಒಳ್ಳೆಯ ಮನಸ್ಯಾ ಅದೀ. ಅದಕ್ಕ ಸಹಾಯ ಮಾಡಿದಿ. ಎಲ್ಲರೂ ಹಂಗ ಇರ್ತಾರೇನು?' ಅಷ್ಟೊತ್ತಿಗೆ ಸ್ಯಾಮಿಯ ಹೆಂಡತಿ ಅವರ ತಿಂಡಿಯ ಪ್ಲೇಟ್‌ಗಳನ್ನು ತಂದಳು. ಆ ಐದು ತಾಟುಗಳನ್ನು ಆಕೆ ಒಂದು ಟ್ರೇದಲ್ಲಿ ಇಟ್ಟುಕೊಂಡು ಬರಬಹುದಾಗಿತ್ತು. ಆದರೆ ಎರಡೂ ಕೈಯಲ್ಲಿ ಎರಡೆರಡು ಮತ್ತೊಂದನ್ನು ತೋಳಿನ ಮೇಲೆ ಬ್ಯಾಲನ್ಸ್ ಮಾಡುತ್ತ ಬಂದಳು. ತಾಟುಗಳನ್ನು ಸಾವಕಾಶ ಇಡುತ್ತ ಅವರ ಸಂಭಾಷಣೆಗೆ ತನ್ನದನ್ನೂ ಸೇರಿಸಿದಳು. "ಈ ಜಗತ್ತಿನೊಳಗ ಯಾರನ್ನೂ ನಂಬು ಹಂಗಿಲ್ಲ. ಅದಕ್ಕ ನಾ ಯಾರ್‌ಯಾರನ್ನೂ ನಂಬಂಗಿಲ್ಲ. ಯಾರನ್ನೂ ನಂಬಂಗಿಲ್ಲಂದ್ರ ಯಾರನ್ನೂ ಇಲ್ಲ." ಆಕೆ ತನ್ನ ಗಂಡನ ಕಡೆಗೆ ನೋಡಿದಳು.

ಮುದುಕಿ ಆ ಹೆಂಗಸಿಗೆ ಕೇಳಿದಳು: 'ಮಿಸ್‌ಫಿಟ್ ಅನ್ನೋ ಕ್ರಿಮಿನಲ್ ತಪ್ಪಿಸಿಕೊಂಡಾನಂತಲ್ಲ, ಅಂವನ ಬಗ್ಗೆ ಕೇಳಿರೇನು?'

'ಆಂವ ಬಂದು ಎಲ್ಲಿ ನಮ್ಮ ಹೋಟೆಲಿಗೆ ದಾಳಿ ಮಾಡ್ತಾನೋ ಅಂತ ನಮಗ ಹೆದರಿಕೆ ಆಗೇತಿ.'

ರೆಡ್‌ಸ್ಯಾಮಿ ಅಜ್ಜಿಯನ್ನು ನೋಡುತ್ತ ಅಂದ: "ಹೌದು ತಾಯಿ, ಇವತ್ತಿನ ಕಾಲದಾಗ ಒಳ್ಳೆಯ ಮನಸ್ಯಾನ ದೀಪ ಹಚ್ಚಿ ಹುಡುಕಬೇಕಾಗೇತಿ. ಹಿಂದಿನ ಕಾಲದಾಗ ಹೆಂಗಿತ್ತು ಗೊತ್ತೈತಲ್ಲ. ನಾವು ನಮ್ಮ ಮನಿಗಳಿಗೆ ಬೋಲ್ಟ್ ಹಾಕಲಾರದ ಹೊರಗ ಹೋಗತಿದ್ದಿವಿ.'